ದಿಃ 29-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ. ಜಿ.ವಿ.ಜಿ. ಪ್ರತಿವಾದಿ ಪರ ವಕೀಲರಿಂದಃ

ನಿಪಿ-15 ಅನ್ನು ನನ್ನ ಜಮೀನಿನ 12 ಗುಂಟೆ ಯನ್ನು ಸರ್ಕಾರದವರು ಪೋಡಿ ಮಾಡಿದ ಕಾರಣ ನಾನು ಹಾಜರುಪಡಿಸಿದ್ದೇನೆ. ದಾವಾ ಸ್ವತ್ತಿನ ಪೂರ್ವಕ್ಕೆ ಒತ್ತುವರಿ ಆಗಿದೆ ಎಂದು ಹೇಳಲು ನಿಪಿ-15 ಅನ್ನು ಹಾಜರುಪಡಿಸಿದ್ದೇನೆ. ನಿಪಿ-15 ರಲ್ಲಿ ಪೂರ್ವಕ್ಕೆ ರಸ್ತೆ ಇದೆ ಎಂದರೆ ಸರಿ. ನಿಪಿ-1 ರಲ್ಲಿ ಪೂರ್ವಕ್ಕೆ ರಸ್ತೆ ಇದೆ ಎಂದು ನಮೂದಾಗಿದೆ ಎಂದರೆ ಸರಿಯಲ್ಲ. ನಿಪಿ-2 ರಲ್ಲೂ ಸಹಾ ಪೂರ್ವಕ್ಕೆ ರಸ್ತೆ ಇದೆ ಎಂದು ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ರಸ್ತೆ ಆದ ನಂತರ ನನ್ನ 12 ಗುಂಟೆ ಜಮೀನು ಇದೆ. ನಿಪಿ-15 ರಲ್ಲಿ ನಮೂದಾಗಿರುವ ಪೂರ್ವ ದಿಕ್ಕಿನ ರಸ್ತೆ ಹಾಗೂ ನಿಪಿ-1 ಹಾಗೂ 2 ರಲ್ಲಿ ರಸ್ತೆ ಒಂದೇ ಎಂದರೆ ಸರಿ. ರಸ್ತೆ ಆದ ನಂತರ ನನ್ನ ಜಮೀನು ಇದೆ ಎಂದು ತೋರಿಸಲು ನಿಪಿ-1 ರಲ್ಲಿ ಆಗಲೀ ನಿಪಿ-2 ರಲ್ಲಿ ಆಗಲೀ ನಮೂದಾಗಿಲ್ಲವೆಂದರೆ ಸರಿಯಲ್ಲ. ನನ್ನ ವಾದ ಪತ್ರದಲ್ಲಿ ಆಗಲೀ, ನನ್ನ ಮುಖ್ಯ ವಿಚಾರಣೆಯಲ್ಲಿ ಆಗಲೀ ಪೂರ್ವಕ್ಕೆ ರಸ್ತೆ ಆದ ನಂತರ ನನ್ನ ಜಮೀನು ಇದೆ ಎಂದು ನಮೂದು ಮಾಡಿಲ್ಲವೆಂದರೆ ಸರಿಯಲ್ಲ. ನನ್ನ ತಾತ ರಸ್ತೆ ಆದ ನಂತರ ಜಮೀನನ್ನು ಖರೀದಿ ಮಾಡಿಲ್ಲ ಹಾಗಾಗಿ ನಿಪಿ-1 ಮತ್ತು 2 ರಲ್ಲಿ ನಮೂದಾಗಿಲ್ಲವೆಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸ. ಇದೆ

ಸಹಿ/-

ಹೆ.ಸಿ.ನ್ಯಾಮತ್ತು ಜೆಎಂಎಫ್‌ಸಿ,

ಗೌರಿಬಿದನೂರು